**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**

**ಸಿ.ಸಿ. ನಂ: 135/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ಹೊಸಗೇರಪ್ಪಾ** | **ಪಿ.ಡಬ್ಲ್ಯೂ-03** |
| **ತಂದೆಯ ಹೆಸರು** | **:** | **ತಿಪ್ಪಣ್ಣಾ** | **ಸಿ.ಡಬ್ಲ್ಯೂ-09** |
| **ವಯಸ್ಸು** | **:** | **52 ವರ್ಷ** | |
| **ಉದ್ಯೋಗ** | **:** | **ವ್ಯವಸಾಯ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 13.07.2026.** |
| **ವಾಸಸ್ಥಳ** | **:** | **ಕುರೆಕುಪ್ಪಾ ಗ್ರಾಮ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ 1 ಮತ್ತು 2 ನೇ ಆರೋಪಿತರು ಪರಿಚಯ. ಚಾಸಾ 1, 8 ಮತ್ತು 10 ರವರು ನನಗೆ ಗೊತ್ತು. ಸುಮಾರು 2 ವರ್ಷಗಳ ಹಿಂದೆ ನಾನು ಬ್ಯಾಂಕಿನಲ್ಲಿ ಇದ್ದಾಗ ಬ್ಯಾಂಕಿನ ಮುಂದುಗಡೆ ಜನರು ತುಂಬ ಸೇರಿರುವುದರಿಂದ ನಾನು ಅಲ್ಲಿ ಹೋಗಿ ೋಗಿ ನೋಡಿದಾಗ ಒಬ್ಬ ಹುಡುಗನಿಗೆ ಗಾಯಗಳು ಆಗಿದ್ದು, ನಾನು ಅವನಿಗೆ ಸಂಜೀವಿನಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಗ ಅವನು ಮೃತ ಪಟ್ಟಿರುವುದು ಗೊತ್ತಾಗಿರುತ್ತದೆ.

**(ಎಪಿಪಿಯವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಎ.ಪಿ.ಪಿ. ರವರಿಂದಃ**

ದಿಃ 14-10-2020 ರಂದು ಸಂಜೆ 5.00 ಗಂಟೆಗೆ ನಾನು ಚಾಸಾ 10 ರವರ ಕಟಿಂಗ್ ಶಾಪ್ ಹತ್ತಿರ ಮಾತನಾಡುತ್ತಾ ನಿಂತಿದ್ದೆ ಎಂದರೆ ಸರಿ. ಆಗ 1 ನೇ

ಆರೋಪಿತರು ತನ್ನ ಟ್ರ್ಯಾಕ್ಟರ್ ನಂಃ ಕೆಎ-35-ಟಿಎ-8280 ಮತ್ತು ಟೇಲರ್ ನಂಬಃ ಕೆಎ-35-ಟಿ-8747 ನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬರುತ್ತಿದ್ದಾಗ ರಸ್ತೆಯಲ್ಲಿ ಅಡ್ಡ ಬಂದು ಎಮ್ಮೆಯನ್ನು ತಪ್ಪಿಸಲು ಹೋಗಿ ಸೈಕಲ್ ನಲ್ಲಿ ಬರುತ್ತಿದ್ದ ಶಂಕರ ನಿಗೆ ಡಿಕ್ಕಿ ಪಡೆಸಿರುತ್ತಾನೆ ಎಂದರೆ ನಾನು ನೋಡಿರುವುದಿಲ್ಲ. ಸದರಿ ಅಪಘಾತದ ಪರಿಣಾಮ ಶಂಕರ ರವರಿಗೆ ಮುಖಕ್ಕೆ, ಎದೆಗೆ ಮತ್ತು ಕಾಲಿಗೆ ತೆರಚಿದ ರಕ್ತ ಗಾಯಗಳು ಆಗಿರುತ್ತವೆ ಎಂದರೆ ಸರಿ. ಆಗ ನಾನು ಮತ್ತು ಚಾಸಾ 10 ರವರು ಹೋಗಿ ಸದರಿ ಹುಡುಗನನ್ನು ವಿಚಾರಿಸಿರುತ್ತೇವೆ ಎಂದರೆ ಸರಿ. ನಾನು 1 ನೇ ಆರೋಪಿಯನ್ನು ಟ್ರ್ಯಾಕ್ಟರ್ ಹೊಡೆಯುವುದನ್ನು ನೋಡಿರುವುದಿಲ್ಲ ಆದರೆ ನಂತರವಾಗಿ ಗೊತ್ತಾಗಿರುತ್ತದೆ. ಈ ರೀತಿ ನಾನು ಪೊಲೀಸ್‌ರ ಮುಂದೆ ದಿಃ18.10.2020 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಆರ್.ವಿ ವಕೀಲರಿಂದ .</u>**

ಅಪಘಾತವು ಟ್ರ್ಯಾಕ್ಟರ್ ಸೈಕಲ್ ಗೆ ಹೋಡದ ಕಾರಣ ಆಗಿರುತ್ತದೆ ಅಥವಾ ಎಮ್ಮೆ ಶಂಕರ ಮೇಲೆ ಬಿದ್ದರಿಂದ ಆಗಿರುತ್ತದೆ ಎಂದು ನಾನು ನೋಡಿರುವುದಿಲ್ಲ. ಅಪಘಾತ ಹೇಗೆ ಆಯಿತು ಮತ್ತು ಯಾರ ತಪ್ಪಿನಿಂದ ಆಯಿತು ಎಂದು ನಾನಾ ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಟ್ರ್ಯಾಕ್ಟರ್ ಯಾರು ಚಾಲನೆ ಮಾಡುತ್ತಿದ್ದರು ಎಂದು ಸಹ ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸ್‌ರು ನನ್ನ ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ತಿಳಿಸಿ ಹೇಳಿರುವುದಿಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಚಾಸಾ 1 ರವರು ನಮ್ಮ

ಊರಿನವರು ಆಗಿದ್ದರಿಂದ ಅವರ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**